# ಕಮ್ಮಿತ್ತುನಾಡು

ಸಂಪುಟ: 05



ಸಂಪಾದಕರು

ಡಾ. ಮಂಜುನಾಥ ಎಸ್. ಪಾಟೀಲ

ಡಾ. ಆದಿತ್ಯ

K.E. BOARD'S FIRST GRADE ARTS & COMMERCE COLLEGE * DHARWAD-6

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

ಕಮ್ಮಿತ್ತುನಾಡು – (ಸಂಪುಟ: ೦೫) ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನ ಲೇಖನಗಳ ಸಂಗ್ರಹ

**KAMMITTUNADU** - (VOLUME-05) A COLLECTION OF RESEARCH ARTICLES RELATED TO HISTORY AND CULTURE

Written By :
**Dr Adithya**
**Dr. Manjunath S. Patil**

Published by:
**Chetan Kanabur**
**Chethan Books**
# 624, 9th `D' Main, Hampinagara,
Bengaluru-560104
Mob: 99861 67684

First Impression: 2021
Pages: 172
Book Size : 1/8 Demi
Price : Rs. 175/-
ISBN: 978-81-949537-9-1
© Author
Paper Used : 70 GSM Maplitho
Copies: 1000
DTP: Brahmi Creations, Bengaluru.
Cover Design : Chetan

Print at :
**A.M. Prints**
Kamakshipalya
Bengaluru- 560079

This book is protected by copyright laws. No part of this book is to be reproduced, transmitted, utilized or stored in any form or by any means now known or hereinafter invented, electronic, digital or mechanical, including photocopying, scanning, recording or by any information storage or retrieval system, without prior written permission from the author or publisher.

K. E. BOARD'S FIRST GRADE ARTS & COMMERCE COLLEGE
DHARWAD-6
COLLEGE CODE: 1218

## ಸಲಹಾ ಮಂಡಳಿ

**ಡಾ. ಕೆ.ಪಿ. ಈರಣ್ಣ**
ವಿಶ್ರಾಂತ ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಡಾ. ವಾಸುದೇವ ಬಡಿಗೇರ**
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಗಂಗಾಧರ ದೈವಜ್ಞ**
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಕೆ. ಚೆನ್ನಬಸಪ್ಪ**
ವಿಶ್ರಾಂತ ಪ್ರಾಧ್ಯಾಪಕರು
ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆ
ಜಮಖಂಡಿ

**ಡಾ. ಎಸ್. ನಾಗರಾಜಪ್ಪ**
ಸಹಾಯಕ ಅಧೀಕ್ಷಕ ಶಾಸನ ತಜ್ಞರು
ಎ.ಎಸ್.ಐ, ಮೈಸೂರು

**ಶ್ರೀ. ನೆಲ್ಕುದ್ರಿ ಸದಾನಂದಪ್ಪ**
ಸಹಾಯಕ ನಿರ್ದೇಶಕರು
ರಾಜ್ಯ ಪತ್ರಾಗಾರ ಇಲಾಖೆ
ವಿಕಾಸಸೌದ, ಬೆಂಗಳೂರು

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

K. E. BOARD'S FIRST GRADE ARTS & COMMERCE COLLEGE
DHARWAD-8
COLLEGE
CODE: 1218

# ಪರಿವಿಡಿ

ಮುನ್ನುಡಿ
ಸಂಪಾದಕರ ಮಾತು

೧. NATIONAL YOUTH LEAGUE: IT'S ROLE IN FREEDOM MOVEMENT IN MYSORE STATE / ೧೩
Dr. BASAVARAJ N. AKKI

೨. ಪ್ರಾಚೀನ ಆಡಳಿತ ವಿಭಾಗ : ಹಗರಟಗಿ ನಾಡು / ೨೦
ಡಾ. ರಮೇಶ ನಾಯಕ

೩. ಸ್ಥಳೀಯ ಇತಿಹಾಸ : ಮಹತ್ವ ಮತ್ತು ಪ್ರಸ್ತುತತೆ / ೪೪
ಡಾ. ವಾಸುದೇವ ಬಡಿಗೇರ

೪. ಇಮ್ಮಡಿ ಬುಕ್ಕರಾಯನ ಎರಡು ಜೈನ ಶಾಸನಗಳು / ೫೯
ಡಾ. ನಾಗರಾಜಪ್ಪ ಎಸ್.,

೫. ಹಾಲಬಸವನ ಗುಡಿ ಸ್ಮಾರಕ: ನಾರಾಯಣಪುರ / ೭೯
ಡಾ. ವೀರಶೆಟ್ಟಿ ಬಿ. ಗಾರಂಪಳ್ಳಿ

೬. ವೀರಗಲ್ಲು ಶಿಲ್ಪಗಳ ರಸ, ಭಾವ ಮತ್ತು ಭಂಗಿಗಳು / ೮೬
ಕು. ಶ್ವೇತಾ ರ. ಭಸ್ಮೆ

೭. ಧಾರವಾಡ ತಾಲೂಕಿನ ಅಪರೂಪದ ಶಾಸನ ಶಿಲ್ಪಗಳು / ೧೦೫
ಡಾ. ಸುರೇಶ ಕ. ಹಾನಗಲ್ಲ

೮. ವಿಜಯಪುರ ಜಿಲ್ಲೆಯ ಶಾಸನೋಕ್ತ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು / ೧೧೨
ಡಾ. ಮಂಜುನಾಥ ಎಸ್. ಪಾಟೀಲ

೯. ಕೊಣ್ಣೂರಿನ ಶಾಸನೋಕ್ತ ಜೈನ ಮುನಿಗಳು / ೧೨೧
ಕು. ಶರಣಪ್ಪ ಬಸಪ್ಪ ಜಗ್ಗಲ

೧೦.

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-8

# ೭. ಧಾರವಾಡ ತಾಲೂಕಿನ ಅಪರೂಪದ ಶಾಸನ ಶಿಲ್ಪಗಳು

K. E. BOARD'S FIRST GRADE ARTS & COMMERCE COLLEGE ★ DHARWAD-6 COLLEGE CODE: 1218

ಡಾ. ಸುರೇಶ ಕ. ಹಾನಗಲ್ಲ

ಕರ್ನಾಟಕ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಧಾರವಾಡ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಇದೊಂದು ಸಾಂಸ್ಕೃತಿಕ ನಗರವೂ ಹೌದು, ಪುರಾತತ್ವ ಅವಿಭಾಜ್ಯ ಅಂಗವೂ ಆಗಿದೆ. ಧಾರವಾಡ ಎಂಬ ಪದದ.[೧] ಕುರಿತಾಗಿ ದುರ್ಗಾದೇವಾಲಯದಲ್ಲಿರುವ ೧೨ನೇ ಶತಮಾನದ ಆರನೇ ವಿಕ್ರಮಾದಿತ್ಯನ ತ್ರಿಭುವನಮಲ್ಲನ ಶಾಸನ, ನರೇಂದ್ರದ[೨] ಸೋಮೇಶ್ವರ ದೇವಾಲಯದಲ್ಲಿರುವ ಶಾಸನ, ಮನಗುಂಡಿ[೩] ಮತ್ತು ಹೊಂಬಳದ[೪] ಶಾಸನಗಳಲ್ಲಿ ಸ್ಪಷ್ಟ ಉಲ್ಲೇಖ ದೊರೆಯುತ್ತದೆ. ಹಾಗೆಯೇ ಈ ತಾಲೂಕು ಒಟ್ಟು ೧.೦೫೨.೫ಚ.ಕಿ.ಮೀ ವಿಸ್ತೀರ್ಣವನ್ನು ಜೊತೆಗೆ ನಾಲ್ಕು ಹೋಬಳಿಗಳಿಂದ ಕೂಡಿದೆ. ಈ ತಾಲೂಕಿನ ಪರಿಸರದಲ್ಲಿ ಆಳಿ-ಅಳಿದ ಅರಸರುಗಳು, ಮಹಾಮಂಡಳೇಶ್ವರರು, ಮಹಾಸಾಮಂತ ಮೊದಲಾದ ಅರಸು ಮನೆತನಗಳು ಆಳ್ವಿಕೆ ಮಾಡಿದರಲ್ಲದೇ ಹಲವಾರು ದೇವಾಲಯ ನಿರ್ಮಾಣ, ಮೂರ್ತಿಶಿಲ್ಪ ಪ್ರತಿಷ್ಠಾಪನೆಯನ್ನು ಮಾಡಿದ್ದು, ಅವುಗಳ ಜೀರ್ಣೋದ್ಧಾರ ಕಾರ್ಯಗಳಿಗಾಗಿ ಉದಾರವಾಗಿ ದಾನದತ್ತಿಗಳನ್ನು ನೀಡಿರುವುದನ್ನು ಶಾಸನಗಳು ದಾಖಲಿಸುತ್ತವೆ. ಪ್ರಸ್ತುತ ಈ ತಾಲೂಕಿನ ಅಪರೂಪದ ಶಾಸನ ಶಿಲ್ಪಗಳನ್ನು ಕುರಿತು ಚರ್ಚಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಶಿಲ್ಪವೆಂದರೆ ಯಾವುದೇ ಒಂದು ವಾಸ್ತವಿಕ ಇಲ್ಲವೆ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಯೇ ಶಿಲ್ಪ.[೫] ಮೇಲ್ನೋಟಕ್ಕೆ ಶಿಲ್ಪ ಮತ್ತು ಶಾಸನಶಿಲ್ಪಗಳು ಒಂದೇಯಾದರೂ ಅವುಗಳ ಸೂಕ್ಷ್ಮತೆಯನ್ನು ಗಮನಿಸಿದರೆ ಶಿಲ್ಪ ವಿಶಾಲವಾದ ಅರ್ಥವನ್ನು ನೀಡಿದರೆ ಶಾಸನಶಿಲ್ಪಗಳು ಕೇವಲ ಶಾಸನಗಳ ಮೇಲಿರುವ ಉಬ್ಬುಶಿಲ್ಪಗಳ ಅಧ್ಯಯನವನ್ನು ಮಾಡುವುದಾಗಿದೆ.[೬]

ಶಾಸನಗಳಲ್ಲಿ ವೈವಿಧ್ಯತೆಗಳು ಕಂಡು ಬಂದಂತೆ ಶಾಸನ ಶಿಲ್ಪಗಳಲ್ಲೂ ವೈವಿಧ್ಯತೆಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಈ ಪ್ರದೇಶದಲ್ಲಿ ಶಾಸನಶಿಲ್ಪಗಳಲ್ಲಿ


PRINCIPAL
K. E. Board's
First Grade Arts & Commerce College
Circle, Savadatti Road, Dharwa

### ದಾನಶಾಸನ ಶಿಲ್ಪಗಳು

ಶಾಸನಗಳಲ್ಲಿ ದಾನಕ್ಕೆ ತನ್ನದೇ ಆದ ವಿಶೇಷತೆಯನ್ನು ಕೊಡಲಾಗಿದ್ದು, ಅಗ್ನಿಪುರಾಣದಲ್ಲಿ ಹದಿನಾರು ರೀತಿಯ ದಾನಗಳನ್ನು ಗುರುತಿಸಲಾಗಿದೆ.[೭] ದಾನಶಾಸನ ಶಿಲ್ಪಗಳಲ್ಲಿ ಶೈವದಾನ ಶಾಸನಶಿಲ್ಪಗಳು, ವೈಷ್ಣವದಾನ ಶಾಸನಶಿಲ್ಪಗಳು, ಜೈನದಾನ ಶಾಸನಶಿಲ್ಪಗಳೆಂದು ವಿಭಾಗಿಸಬಹುದಾಗಿದೆ. ಶೈವದಾನ ಶಾಸನಶಿಲ್ಪಗಳಲ್ಲಿ ಶಿವಲಿಂಗ, ಆಕಳು ಮತ್ತು ಸೂರ್ಯ ಚಂದ್ರ ಮತ್ತು ಶಿವಲಿಂಗದ ಚಿತ್ರಣ, ಶಿವಲಿಂಗದ ಜೊತೆಗೆ ಆಕಳು ಮತ್ತು ನಂದಿಯಶಿಲ್ಪ, ಮಂಟಪದಲ್ಲಿ ಶಿವಲಿಂಗ ಭಕ್ತ ಮತ್ತು ನಂದಿಯಶಿಲ್ಪ, ಶಿವಲಿಂಗ, ಭಕ್ತ, ಆಕಳು ಮುಂತಾದವುಗಳನ್ನು ಕಾಣಬಹುದಾಗಿದ್ದು, ಪ್ರಸ್ತುತ ಈ ರೀತಿಯ ಶಾಸನ ಶಿಲ್ಪಗಳು ಧಾರವಾಡ ತಾಲೂಕಿನ ಕಲ್ಲಾಪುರ[೮], ಮುಗದ್, ಸಿಂಗನಹಳ್ಳಿ[೧೦], ಕಡಬಗಟ್ಟಿ[೧೧], ಅಮ್ಮಿನಬಾವಿ[೧೨], ಕೊಟಬಾಗಿ[೧೩], ಮಾದನಬಾವಿ[೧೪] ಇನ್ನೂ ಮುಂತಾದ ಸ್ಥಳಗಳನ್ನು ಗುರುತಿಸಬಹುದಾಗಿದ್ದು, ಹೆಚ್ಚಿನ ಮಟ್ಟಿಗೆ ಇಲ್ಲಿ ದೊರೆಯುವಂತಹ ಶಿಲ್ಪಗಳು ಶಾಸನರಹಿತ ಶಿಲ್ಪಗಳಾಗಿವೆ.



ಕನಕೂರು



ನರೇಂದ್ರ



### ಜೈನದಾನ ಶಾಸನಶಿಲ್ಪಗಳು

ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯತೆಯನ್ನು ಹೊಂದಿರುವ ಧರ್ಮಗಳಲ್ಲಿ ಜೈನಧರ್ಮವೂ ಒಂದಾಗಿದ್ದು, ಜೈನಧರ್ಮಗಳಲ್ಲಿ ದಾನವೂ ಪ್ರಮುಖವಾಗಿದೆ. ಅವುಗಳಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದಾನಗಳಾಗಿವೆ. ಲೌಕಿಕ ದಾನಗಳಲ್ಲಿ ದಯಾದತ್ತಿ, ಸಮಾನದತ್ತಿ ಹಾಗೂ ಸಕಲದತ್ತಿ ಎಂದೂ ಜೊತೆಗೆ ಪಾರಮಾರ್ಥಿಕ ದಾನಗಳಲ್ಲಿ ಉತ್ತಮ, ಮಧ್ಯಮ; ಜಘನ್ಯ ಹಾಗೂ ಕುಪಾತ್ರರೆಂದು «¨ ëV¸ ÃÁVz É[೧೫] ಜೈನದಾನ ಶಾಸನಶಿಲ್ಪವನ್ನು ಶಿಲ್ಪದ ದೃಷ್ಟಿಯಿಂದ ನೋಡಲಾಗಿ ಸಾಮಾನ್ಯವಾಗಿ ತೀರ್ಥಂಕರನು ನಿಂತ ಅಥವಾ ಕುಳಿತ ಭಂಗಿಯಲ್ಲಿರುವ ಜೊತೆಗೆ ಖಡ್ಗಾಸನ ಅಥವಾ ಪರ್ಯಂಕಾಸನದಲ್ಲಿ ಧ್ಯಾನಾಸ್ಥನಾದ ಚಿತ್ರವಿದ್ದು ಹಾಗೂ ಶಾಸನದ ಲಲಾಟದ ಎಡ ಹಾಗೂ ಬಲಭಾಗಗಳಲ್ಲಿ ಸೂರ್ಯ-ಚಂದ್ರನನ್ನು ಜಿನಮೂರ್ತಿಯ ತಲೆಯ ಮೇಲೆ ಮುಕ್ಕೊಡೆಯನ್ನು ಹಾಗೂ ಎರಡೂ ಬದಿಗಳಲ್ಲಿ ಚಾಮರದಾರಿಗಳು ಮತ್ತು ಪ್ರಾಣಿಗಳ ಚಿತ್ರಗಳನ್ನು ಗುರುತಿಸಬಹುದಾಗಿದೆ.

ಪ್ರಸ್ತುತ ರೀತಿಯ ಶಿಲ್ಪವು ಅಮ್ಮಿನಭಾವಿ[೧೬] ನೇಮಿನಾಥ ಬಸದಿಯಲ್ಲಿ ಚಂದ್ರನಾಥ ಶಿಲ್ಪವಿದೆ. ಪದ್ಮಾಸನದಲ್ಲಿ ಕುಳಿತಿದ್ದು, ಈತನ ಕೂದಲುಗಳು ಗುಂಗುರ ರೀತಿಯಲ್ಲಿವೆ. ಕಿವಿಗಳು ಉದ್ದವಾಗಿವೆ. ತಲೆ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಬೆನ್ನ ಹಿಂಭಾಗದಲ್ಲಿ ಆಸನವಿದ್ದು, ಇದನ್ನು ವ್ಯಾಳಿಗಳು ಹೊತ್ತಿವೆ. ಈ ವ್ಯಾಳಿಗಳ ಬಲಗಡೆ ಜೈನ ಗುರುಗಳು ಕುಳಿತಿದ್ದಾರೆ. ಎಡಗಡೆ ಇಬ್ಬರು ಶಿಷ್ಯರು ಕೈಮುಗಿದು ಕುಳಿತಿದ್ದಾರೆ. ಚಂದ್ರನಾಥನ ಹಿಂಭಾಗದಲ್ಲಿ ಅಂದರೆ ಭುಜದ ಸಮಾನಾಂತರವಾಗಿ ಚಾಮರಧಾರಿಯರಿದ್ದು, ತ್ರಿಭಂಗಿಯಲ್ಲಿ ನಿಂತಿದ್ದಾರೆ. ಮತ್ತು ಆಭರಣಗಳಿಂದ ಭೂಷಿತರಾಗಿದ್ದಾರೆ. ಹಾಗೆಯೇ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಇದರ ಸುತ್ತಲೂ ಹೂ ಬಳ್ಳಿಗಳ ಅಲಂಕರಣವಿದೆ. ಮತ್ತು ಸಿಂಹಪೀಠದಲ್ಲಿ ಐದು ಸಿಂಹಗಳನ್ನು ಕಾಣುತ್ತೇವೆ. ಪ್ರಸ್ತುತ ಈ ರೀತಿಯ ಶಿಲ್ಪಗಳು ಮುಗುದ[೧೭], ಗರಗ[೧೮], ಮರೇವಾಡ[೧೯] ಪ್ರದೇಶಗಳಲ್ಲಿ ದೊರೆತಿವೆ.

PRINCIPAL
K. E. Board's
First Grade Arts & Commerce College
Shivaji Circle, Savadatti Road, Dharwad-6

### ತುರುಗೋಳ ಶಾಸನಶಿಲ್ಪಗಳು

ಸಂಸ್ಕೃತದ "ಗೋಗ್ರಹಣ" ಎಂಬ ಪದಕ್ಕೆ ಸಮಾನಾಂತರವಾಗಿ ನಾವು ತುರುಗೋಳ್ ಎಂಬ ಪದ ಬಳಕೆಯಲ್ಲಿದ್ದುದನ್ನು ಕಾಣುತ್ತೇವೆ. ವೈರಿಗಳನ್ನು,

ಸಂದರ್ಭದಲ್ಲಿ ಅವನು ಪ್ರಾಣವನ್ನು ಲೆಕ್ಕಿಸದೇ ಹೋರಾಡುತಿದ್ದನು. ಇಂತಹ ವೀರರ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳಲ್ಲಿ ಒಂದು ಕಡೆ ಗೋವುಗಳನ್ನು ಚಿತ್ರಿಸಲಾಗಿದ್ದು, ಇದನ್ನು ತುರುಗೋಳ್ ವೀರಗಲ್ಲುಗಳೆಂದು ಕರೆಯುತ್ತಾರೆ. ಈ ರೀತಿಯ ಶಿಲ್ಪಗಳನ್ನು ಗುರುತಿಸುವುದು ಸುಲಭವಾಗಿದ್ದು, ವೀರನು ಹೋರಾಟಕ್ಕೆ ಸನ್ನದ್ದನಾಗಿರುವುದರ ಜೊತೆಗೆ ಯಾವುದಾದರೊಂದು ಕಡೆ ದನಗಳು ನಿಂತಿರುವಂತೆ ಚಿತ್ರಿಸಿರುತ್ತಾರೆ. ಪ್ರಸ್ತುತ ಈ ಪ್ರದೇಶದಲ್ಲಿ ಶಾಸನರಹಿತ ಶಿಲ್ಪಗಳೇ ಹೆಚ್ಚಿಗೆ ಕಾಣಸಿಗುತ್ತವೆ. ಅವುಗಳೆಂದರೆ ಬೆಣಚಿ,[೨೦] ಡೋರಿ,[೨೧] ಕಲ್ಲಾಪುರ,[೨೨] ಮುಗುದ,[೨೩] ಹಳೆತೆಗೂರು[೨೪] ಇನ್ನು ಮುಂತಾದ ಪ್ರದೇಶಗಳನ್ನು ಗುರುತಿಸಬಹುದಾಗಿ.

### ಹುಲಿಬೇಟೆಶಿಲ್ಪ

ಮಾನವನಿಗಿಂತ ಬಲಿಷ್ಠವಾದ ಕ್ರೂರ ಪ್ರಾಣಿಗಳಲ್ಲಿ ಹುಲಿ ಒಂದಾಗಿದೆ. ಹುಲಿಯನ್ನು ಬೇಟೆಯಾಡಲು ಬಹಳ ಧೈರ್ಯಶಾಲಿಯಾಗಿರಬೇಕು. ಇಂತಹ ಬಲಿಷ್ಠ ಪ್ರಾಣಿಯೊಂದಿಗೆ ಹೋರಾಡಿ ವೀರ ಮರಣವನ್ನಪ್ಪಿದ ವಿಷಯ ವೀರಗಲ್ಲುಗಳಲ್ಲಿ ದೊರೆಯುತ್ತದೆ. ಪ್ರಸ್ತುತ ಧಾರವಾಡ ತಾಲೂಕಿನ ಬೋಗೂರು[೨೫] ಸ್ಥಳದಲ್ಲಿ ಶಾಸನರಹಿತ ಶಿಲ್ಪ ಕಂಡು ಬರುತ್ತದೆ.

### ಮಹಾಸತಿ ಶಿಲ್ಪಗಳು

ಲೌಕಿಕ ಬಲಿದಾನ ಶಾಸನಶಿಲ್ಪಗಳಲ್ಲಿ ಮಹಾಸತಿ ಶಿಲ್ಪಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಪತಿಯು ಮಡಿದಾಗ ಅವನ ಸತಿಯೂ ಕೂಡಾ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುವ ಅವರ ನೆನಪಿಗಾಗಿ ನಿಲ್ಲಿಸಿದ ಶಾಸನಶಿಲ್ಪಗಳೇ ಮಹಾಸತಿ ಶಿಲ್ಪಗಳಾಗಿವೆ. ವೈವಿಧ್ಯತೆಯ ದೃಷ್ಠಿಯಿಂದ ಎರಡು ಭಾಗವಾಗಿ ವಿಂಗಡಿಸಲಾಗಿದ್ದು, ಸಹಗಮನಶಿಲ್ಪ, ಅನುಗಮನಶಿಲ್ಪಗಳೆಂದು, ಸಹಗಮನಶಿಲ್ಪ ಪತಿಯು ಮರಣವನ್ನಪ್ಪಿದಾಗ ಅವನ ಜೊತೆಯಲ್ಲಿಯೇ ಚಿತೆಗೆಹಾರಿ ಪ್ರಾಣಬಿಡುತ್ತಿದ್ದ ಆಚರಣೆ ಸಹಗಮನ ಎಂದು ಹೇಳಲಾಗಿದೆ. ಅನುಗಮನಶಿಲ್ಪ ಪತಿಯು ದೂರದಲ್ಲಿ ಮಡಿದ ಸುದ್ದಿಯನ್ನು ತಿಳಿದು ಚಿತೆಯನ್ನು ಏರ್ಪಡಿಸಿಕೊಂಡು ಪ್ರಾಣವನ್ನು ಬಿಡುವ ಪದ್ಧತಿಯೇ ಅನುಗಮನ ಪದ್ಧತಿಯಾಗಿದೆ. ಈ ಶಿಲ್ಪಗಳನ್ನು ಪೂರ್ಣಸತಿಶಿಲ್ಪ, ಪೂರ್ಣಸತಿ ಮತ್ತು ಇತರೇಶಿಲ್ಪ ಎಂದೂ ಜೊತೆಗೆ ಇಬ್ಬರು ಸತಿಯರ ಪೂರ್ಣಶಿಲ್ಪ, ವೀರಮಹಾಸತಿಶಿಲ್ಪ, ಒಕ್ಕೈಮಾಸ್ತಿ, ಇಕ್ಕೈಮಾಸ್ತಿ, ಬಹುಕೈ ಮಾಸ್ತಿಶಿಲ್ಪಗಳೆಂದು



ಮನಗುಂಡಿ,[೨೬] ಕಲ್ಲಾಪುರ,[೨೭] ಹಾರೋಬೆಳವಡಗಿ,[೨೮] ಕವಲಗೇರಿ,[೨೯] ಕೊಟೂರು[೩೦] ಇನ್ನು ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತವೆ.

### ನಿಷಿಧಿಶಾಸನ ಶಿಲ್ಪಗಳು

ಸನ್ಯಾಸನ ವಿಧಿಯಿಂದ ಮರಣವನ್ನಪ್ಪಿದಾಗ ಅವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳೇ ನಿಷಿಧಿಶಿಲ್ಪಗಳಾಗಿವೆ. ಆಪತ್‌ಕಾಲದಲ್ಲಿ, ವೃದ್ಯಾಪ್ಯದಿಂದ, ಜರ್ಜರಿತನಾದರೆ, ಗುಣಪಡಿಸಲಾರದ ರೋಗದಿಂದ ಬಳಲುತಿದ್ದರೆ, ಬದುಕಿನ ಆಸೆ ಬತ್ತಿಹೋದಾಗ ಸಲ್ಲೇಖನ ವಿಧಾನದಿಂದ ಮರಣವನ್ನು ಆಹ್ವಾನಿಸುವುದೇ ಸಲ್ಲೇಖನ.[೩೧] ಇನ್ನು ಶಿಲ್ಪದ ವೈಶಿಷ್ಠ್ಯತೆಯಿಂದ ಶಾಸನಸಹಿತ ನಿಷಿಧಿಶಿಲ್ಪಗಳು ಮತ್ತು ಶಾಸನರಹಿತ ನಿಷಿಧಿಶಿಲ್ಪಗಳೆಂದು ವಿಭಾಗಿಸಲಾಗಿದ್ದು, ಸಾಮಾನ್ಯವಾಗಿ ನಿಷಿಧಿಶಾಸನಗಳ ಲಲಾಟಭಾಗದಲ್ಲಿ ಮುನಿಯೊಬ್ಬನು ಕುಳಿತ ಉಪದೇಶ ಮಾಡುತ್ತಿರುವ ಮತ್ತು ಎದುರಿಗೆ ಮಂಡಿಯೂರಿ ಕುಳಿತ ವ್ಯಕ್ತಿಯ ಚಿತ್ರಣವಿರುತ್ತದೆ. ಪ್ರಸ್ತುತ ಇಂತಹಶಿಲ್ಪವು ಗರಗದ[೩೨] ಕೆರೆಯ ದಂಡೆಯ ಮೇಲೆ ನಿಷಿಧಿಶಿಲ್ಪ ಇದೆ. ಇದು ಎರಡು ಹಂತದ ಶಿಲ್ಪ ಪಟ್ಟಿಕೆಯಿಂದ ಕೂಡಿದ್ದು, ೮೭ ಸೆಂ.ಮೀ ಎತ್ತರ ಮತ್ತು ೪೭ ಸೆಂ.ಮೀ ಅಗಲವನ್ನು ಹೊಂದಿದೆ. ಮೇಲಿನ ಪಟ್ಟಿಕೆಯಲ್ಲಿ ಜಿನಾಲಯದ ಪ್ರತಿರೂಪಂದತಿರುವ ತೀರ್ಥಂಕರನಿದ್ದು ಅವನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರಭಾಗದಲ್ಲಿ ಪ್ರಭಾಮಂಡಲವಿದ್ದು, ಇಕ್ಕೆಲಗಳಲ್ಲಿ ಹಿಡಿಸಹಿತ ಎರಡು ಚಾಮರಗಳಿವೆ. ಎರಡನೇ ಪಟ್ಟಿಕೆಯಲ್ಲಿ ಮುನಿವೀರಾಸನದಲ್ಲಿ ಆಸೀನರಾಗಿದ್ದು, ವ್ರತಧಾರಿಗೆ ವ್ರತವನ್ನು ಬೋಧಿಸುತ್ತಿದ್ದಾನೆ. ವ್ರತಧಾರಿಯು ಅಂಜಲಿ ಮುದ್ರೆಯನ್ನು ಹೊಂದಿದ್ದಾನೆ. ಇವರಿಬ್ಬರ ಮಧ್ಯದಲ್ಲಿ ಶ್ರುತಪೀಠ, ಕಮಂಡಲವನ್ನು ಕಾಣುತ್ತೇವೆ. ಇನ್ನು ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಕಾಣುತ್ತೇವೆ.

ನರೇಂದ್ರ[೩೩] ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟದಲ್ಲಿ ಈ ಶಿಲ್ಪವಿದೆ. ಇದು ಒಂದು ಹಂತದ ಶಿಲ್ಪ ಪಟ್ಟಿಕೆಯಿಂದ ಕೂಡಿದ್ದು, ಮಧ್ಯದಲ್ಲಿ ತೀರ್ಥಂಕರನು ಪರ್ಯಂಕಾಸನದಲ್ಲಿದ್ದಾನೆ. ಈತನ ಎಡ-ಬದಿಗಳಲ್ಲಿ ಸಮಭಂಗಿಯಲ್ಲಿ ಯಕ್ಷನು, ಚತುರ್ಭುಜಧಾರಿಯಾಗಿದ್ದಾನೆ. ಹಾಗೆಯೇ ಬಲಬದಿಯಲ್ಲಿ ಸಲ್ಲೇಖನ ವ್ರತಧಾರಿ ಕನಕಶಾಂತಿ ಮುನಿಗಳು ವೀರಾಸನದಲ್ಲಿ ಆಸೀನರಾಗಿದ್ದಾರೆ. ಇವರ ಹಿಂಭಾಗದಲ್ಲಿ [illegible]ಲ್ಲಿ ಇಬ್ಬರು ಶ್ರಾವಕರನ್ನು ಕಾಣುತ್ತೇವೆ. ಉಳಿದಂತೆ ಸೂರ್ಯ-ಚಂದ್ರರನ್ನು ಗುರುತಿಸಬಹುದಾಗಿದೆ.

K. E. BOARD'S FIRST GRADE ARTS & COMMERCE COLLEGE DHARWAD-8 CODE: 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad

**ಅಡಿ ಟಿಪ್ಪಣಿಗಳು**

೧. ಕಲಬುರ್ಗಿ ಎಂ.ಎಂ.(ಸಂ), ೧೯೭೫, ಧಾರವಾಡ ಜಿಲ್ಲೆಯ ಶಾಸನಸೂಚಿ, ಪು.೧, ಶಾ.ಸಂ.೬

೨. ಇ.ಪಿ. ೧೩ ಶಾ.ಸಂ.೨೮

೩. ಸುಂದರ ಅ., ೧೯೯೦, ಧಾರವಾಡ ನಗರ:ಸಂಸ್ಕೃತಿ ಪರಂಪರೆ, ಹಚ್ಚೇವು ಕನ್ನಡ ದೀಪ, ಪು.೧೯-೨೦

೪. ಸುಂದರ ಅ., ಪೂರ್ವೋಕ್ತ, ಪು.೨೦

೫. ಶಿವರಾಮ ಕಾರಂತ., ೧೯೭೫, ಭಾರತೀಯಶಿಲ್ಪ, ಪು.೧

೬. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡಶಾಸನಶಿಲ್ಪ, ಪು.೭

೭. ಪೂರ್ವೋಕ್ತ., ಪು.೫೫

೮. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪವಾಗಿದೆ.

೯. Sii.vol.xi-ii, 211

೧೦. Sii.vol.xi-ii, 177

೧೧. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತ ಶಿಲ್ಪವಾಗಿದೆ.

೧೨. Sii.vol.xi-ii, 171

೧೩. Sii.vol.xi-ii, 195

೧೪. Sii.vol.xi-ii, 16

೧೫. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು.೫೬

೧೬. ಕಲಬುರ್ಗಿ ಎಂ.ಎಂ., ಪೂರ್ವೋಕ್ತ, ಪು. ೧೫, ಶಾ.ಸಂ.೭೦

೧೭. ಅದೇ. ಪು.೫, ಶಾ.ಸಂ.೨೪

೧೮. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನೋಕ್ತಶಿಲ್ಪ

೧೯. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೦. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೧. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೨. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೩. Sii.vol.xv, 555



೨೪. ಹನುಮಾಕ್ಷಿ ಗೂಗಿ., ೨೦೧೩, ಹುಬ್ಬಳ್ಳಿ ತಾಲೂಕಿನ ಶಾಸನಗಳು, ಪು. ೩೬

೨೫. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೬. Sii.vol.xv, 651

೨೭. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೮. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೨೯. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೩೦. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತಶಿಲ್ಪ

೩೧. ನರೇಗಲ್ ಎಂ.ಎಸ್., ೨೦೦೯, ಗದಗ ಉತ್ತರ ಜಿಲ್ಲೆಯ ಶಾಸನಗಳು:ಒಂದು ಅಧ್ಯಯನ, ಪು.೨೪೮

೩೨. ಅಪ್ಪಣ್ಣ ಎನ್ ಹಂಜೆ., ೨೦೦೮, ಧಾರವಾಡ ಪರಿಸರದಲ್ಲಿ ಜೈನಧರ್ಮ, ಪು.೧೦೨

೩೩. ಅದೇ., ಪು.೧೦೩

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6





ಚರಿತ್ರೆ ವಿಷಯವನ್ನು ಅಧ್ಯಯನ ಮತ್ತು ಸಂಶೋಧನೆ ಮಾಡುವಾಗ ಹಲವು ಕ್ಷೇತ್ರಗಳನ್ನು ಅಲಕ್ಷಿಸುತ್ತಾ ಬಂದಿರುವುದು ಸ್ಪಷ್ಟ. ಈ ನಿಟ್ಟಿನಲ್ಲಿ ಇಂದು ಇಂತಹ ಅಲಕ್ಷಿತ ಕ್ಷೇತ್ರಗಳ ಅಧ್ಯಯನಗಳು ವಿಫುಲವಾಗಿ ನಡೆಯುತ್ತಿರುವುದು ಗಮನಾರ್ಹ ಸಂಗತಿ. ಹಾಗಾಗಿ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ಶಾಸನ, ದೇವಾಲಯ, ಕೋಟೆಕೊತ್ತಲು, ಶಿಲ್ಪಗಳು ಹಾಗೂ ಸ್ಥಳೀಯ ಮತ್ತು ಮೌಖಿಕ ಚರಿತ್ರೆಯಲ್ಲಿ ನಾಡು-ನುಡಿಯ ಸಂಸ್ಕೃತಿಗೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನಾ ಲೇಖನಗಳನ್ನು ಒಟ್ಟುಗೂಡಿಸಿ ಚರಿತ್ರೆಯ ಸಮಗ್ರತೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಸಂಪುಟದ ಮೂಲಕ ಮಾಡಲಾಗಿದೆ. ನಮ್ಮ ಈ ಸಂಪುಟ ಓದುಗರ ಜೇಬಿಗೆ ಭಾರವೆನಿಸುವಂಥದಲ್ಲ. ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಲೇಖನಗಳ ಸಂಗ್ರಹ ಸಂಪುಟವನ್ನು ಸಹೃದಯರಿಗೆ ಕೊಡಬೇಕೆನ್ನುವ ಆಶಯದೊಂದಿಗೆ ನಮ್ಮ ಈ ಐದನೆಯ ಸಂಪಾದಕ ಕೃತಿಯನ್ನು ಪ್ರಕಟಿಸಲಾಗಿದೆ.

ISBN 819495379-0

K. E. BOARD'S FIRST GRADE ARTS & COMMERCE COLLEGE
DHARWAD-6
COLLEGE CODE: 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

# Special Inscription of Dharwad Taluka

**Dr. Suresh Hanagalla**

In reorganizing the History of Karnataka Dharwad plays is important role. Dhrawad is the culture center of all activities.

The name of Dharwad appear in the inscription 12th century which is found in DurgaDevi Temple, in Someshwar Tmeple of Narendra in Dharwad Taluka and Someshar Temple of Managundi villege 10 km away from Dharwad and Inscription found in Hombala.

This Taluka has 4 Hobnails Sculpture means a creation of something or an imaginary creation of an artist.

Inscription and sculpture may appear as part of the same thing. But when we go through the things with an insight we find differences.

We can find verities in sculpture and inscriptions presently, we can find Shaiva Sculpture inscriptions,Vaishanva Dana Inscriptions, Jain inscriptions, Turugoal Sculptures, Mahasati sculpture and Nishidi sculptures.

## Charity Inscriptions

There are the types of charities according to Agnipuran. Such type of sculptures are found in Kallapur. Mugad, Singanalli, Kadabagatti,Amminabhavi, Kotabagi and Madanbavi in Dharwad Taluka.

### Jain Inscriptions and sculptures.

Usually in Jain sculptures we can find of Tirathankars sitting in different Asanas and we can find Sun and Moon on both the sides of sculptures. This kind of sculpture is found in Amminabavi Basadi.

K. E. BOARD'S FIRST GRADE ARTS & COMMERCE COLLEGE
DHARWAD-6
COLLEGE CODE: 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6

## Turungol of Inscreption and sculptures.

Turungol means in Sanskrit "Gograhan" The duty of the brave was to Protect, the ladies and towns.They fought without caring for their life. The sculpture and inscriptions depict their work done.

## Tiger haunting

In Bogur villege of Dharwad Taluka there is a sculpture showing the man fighting with the tiger. There is no description about the time and Situation.

## Mahasati Sculptures

Mahasati sculptures indicate the death of the wife, dying on the day of the death of her husband by jumping in fire,Secondly the husband dies in some other place, When the news is received the wife enters in the fire and dies.Such type of Sculptures with no inscriptions are found in Managundi, Kallapur,Harobelavadi and Kotur of Dharwad Taluka.

## Nishidhi Shasan or Sculpture

This sculpture indicate the death of a saint or sage, who invites death and dies. The sculpture shows that a Tirathankar is sitting and other man is listening to him. This kind of sculpture is found in Garag and Narendra villege s of Dharwad Taluka.

K. E. BOARD'S FIRST GRADE ARTS & COMMERCE COLLEGE DHARWAD-6 COLLEGE CODE. 1218

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-6